# ಜುಗಾರಿ ಕ್ರಾಸ್

ಕೆ.ಪಿ. ಪೂರ್ಣಚಂದ್ರ ತೇಜಸ್ವಿ ಅವರ "ಕೃಷ್ಣೇಗೌಡರ ಆನೆ" ಹಾಗೂ "ಅಬಚೂರಿನ ಪೋಸ್ಟಾಫೀಸು" ಇವುಗಳ ಆಯ್ದ ಗದ್ಯ ಭಾಗವನ್ನು ಪಠ್ಯ ಪುಸ್ತಕದಲ್ಲಿ ಓದಿದ್ದೆ. ಆದರೆ ಅವರ ಒಂದು ಸಂಪೂರ್ಣ ಕೃತಿಯನ್ನು ಮೊದಲ ಪುಟದಿಂದ ಕಡೆಯ ಪುಟದವರೆಗೆ ಓದಿದ್ದು ಇದೇ ಮೊದಲು. ತುಂಬಾ ಉತ್ಸಾಹದಿಂದ ಓದಿದೆ ಹಾಗೂ ಈಗ ಅದೇ ಉತ್ಸಾಹದಿಂದ ಬರೆಯುತ್ತಿರುವೆನಾದ್ದರಿಂದ ಈ ಲೇಖನ ಸ್ವಲ್ಪ ಉದ್ದವಾಗಿರುತ್ತದೆ.

ಪುಸ್ತಕದ ಹೆಸರನ್ನು ಮೊದಲು ಓದಿದ ತಕ್ಷಣ ನನಗೆ ಇದು ಏನಾಗಿರಬಹುದು ಎಂಬ ಒಂದು ಸಣ್ಣ ಊಹೆಯೂ ಕೂಡ ಇರಲಿಲ್ಲ, ಕಾರಣ ಈ ಕೃತಿಯ ಹೆಸರನ್ನು ಕೇಳಿದ್ದೆ ಮಾತ್ರ ಆದರೆ ಇದರ ಕುರಿತು ಎಳ್ಳಷ್ಟೂ ಗೊತ್ತಿರಲಿಲ್ಲ. ೨೪ ಗಂಟೆಯ ಅವಧಿಯಲ್ಲಿ ನಮ್ಮನ್ನು ಬೇರೊಂದು ಲೋಕಕ್ಕೆ ಕರೆದುಕೊಂಡು ಹೋಗುವ ಸಾಮರ್ಥ್ಯ ಈ ಪುಸ್ತಕಕ್ಕಿದೆ ಮತ್ತು ನಮಗೆ ಗೊತ್ತಿಲ್ಲದಂತೆ ನಾವು ಪಾತ್ರಧಾರಿಗಳಾಗಿ ಕೊನೆಯಲ್ಲಿ ಅವರು ಹುಡುಕ ಹೊರಟ ವಸ್ತುವನ್ನು ನಾವು ಕೂಡ ಏಕೆ ಹುಡುಕಬಾರದು ಎನ್ನುವಷ್ಟರ ಮಟ್ಟಿಗೆ ತಲ್ಲೀನರಾಗಿಬಿಡುತ್ತೇವೆ.

ಜೀವನದ ಎಲ್ಲ ಮಜಲುಗಳನ್ನು ಸೂಕ್ಷ್ಮವಾಗಿ ಹೇಳುತ್ತಾ ಹೊರಡುವ ಕೆ.ಪಿ.ಪಿ ಅವರ ಅಭಿವ್ಯಕ್ತಿ ಶೈಲಿಯನ್ನು ಕಂಡು ಬೆರಗಾಗುತ್ತೇವೆ. ಇಕ್ಬಾಲ್ ಮತ್ತು ಗುರಪ್ಪ ಇವರು ಮಾಡುವ ಅನಾಚಾರ, ಭ್ರಷ್ಟ ವ್ಯವಸ್ಥೆ, ಲಂಚಕೋರತನ, ಕಾಳಧಂಧೆಯ ಅರಿವಿದ್ದರೂ ಲಂಚ ಪಡೆದು, ಅದನ್ನು ಕೊಡುತ್ತಿರುವರಾರು ಎಂಬ ಅರಿವು ಕೂಡ ಇಲ್ಲದಂತೆ ಆ ಕಾಳಧಂಧೆಯ ಒಂದು ಭಾಗವಾಗಿಬಿಡುವ ಅಜ್ಞಾನದ ಅನಾವರಣವನ್ನು ತುಂಬಾ ಸುಂದರವಾಗಿ ಮಾಡುತ್ತಾರೆ. ಒಟ್ಟಾಗಿ ಒಗ್ಗಟಿನಿಂದ ಇಂತಹ ಲಂಚಕೋರರ ವಿರುದ್ಧ ನಿಂತರೆ ಗೆಲ್ಲಬಹುದು ಎನ್ನುವುದನ್ನು ಸಹ ಉದಾಹರಣೆಯ ಮೂಲಕ ತೋರಿಸುತ್ತಾರೆ. ಯಾವುದೇ ರೀತಿಯ ಮೌಲ್ಯವನ್ನು ಜೀವನಾದರ್ಶವನ್ನು ಅಳವಡಿಸಿಕೊಳ್ಳದೇ ಹೇಗೆ ಜನ ಬದುಕುತ್ತಾರೆ ಎಂಬುದರ ಸ್ಪಷ್ಟ ಚಿತ್ರಣ ಲಭ್ಯವಾಗುತ್ತದೆ.

'ಮೇದರಹಳ್ಳಿಯ ಅವಸಾನ' ಕುರಿತು ಹೇಳುವಾಗ, ಒಂದು ಹಳ್ಳಿ ಅದರೊಂದಿಗೆ ಒಂದು ನಾಗರೀಕತೆ ಹೇಗೆ ನಾಶವಾಗುತ್ತದೆ ಎಂಬುದು ತಿಳಿದು ಇತಿಹಾಸದಲ್ಲಿ ಹಿಂದೆ ಹೇಗೆ ಒಂದು ನಾಗರೀಕತೆ ಅವನತಿಯತ್ತ ಹೆಜ್ಜೆ ಹಾಕಿರಬಹುದು ಎಂಬುದು ತಿಳಿಯುತ್ತದೆ. ಬಿದಿರನ ಗುಣಲಕ್ಷಣಗಳ ಪರಿಚಯ, ಮೂಢನಂಬಿಕೆಗಳು ಬೇರುಬಿಟ್ಟ ರೀತಿ, ಶಾಪ – ಬಹುಶಃ ಈ ಶಾಪಗಳು ದೈವ ಶ್ರದ್ಧೆಯ ಪ್ರತೀಕವಾಗಿ ಹುಟ್ಟಿಕೊಂಡಿರಬಹುದು. "ಮುರುಟಿದ ಸೂರಿನ ಕುಸಿದ ಗೋಡೆಗಳ ಈ ಜೋಪಡಿಗಳು ಖಾಯಿಲೆ ಹಿಡಿದ ಮುದುಕರಂತೆ"– ಈ ಒಂದು ವಾಕ್ಯದಲ್ಲಿ ವಯಸ್ಸಾದ ಮೇಲೆ ಮನುಷ್ಯನಿಗೆ ಒದಗುವ ಪಾಡು ಅದರೊಂದಿಗೆ ಒಂದು ಮನೆ, ಮನೆಯಿಂದ ಒಂದು ಹಳ್ಳಿ ನಾಶವಾಗುವ ರೀತಿಯನ್ನು ಅರ್ಥವತ್ತಾಗಿ ಹೇಳುತ್ತಾರೆ. 'ತಲೆ ಎತ್ತಿದ್ದು ಧರೆಗುರುಳಲೇಬೇಕೆಂಬ ಜಡ ನಿಯಮವೋ' ಎನ್ನುತ್ತಾರೆ ಲೇಖಕರು, ಇದು ಜಡ ನಿಯಮವೋ ಅಥವಾ ಪ್ರಕೃತಿ ನಿಯಮವೋ? ಹುಟ್ಟಿದ ಮನುಷ್ಯ ಹೇಗೆ ಸಾಯಲೇಬೇಕೋ ಹಾಗೆಯೇ ಇದು ಸಹಜ ಪ್ರಕೃತಿ ಎನ್ನುವುದು ನನ್ನ ಅಭಿಪ್ರಾಯ. ಸಹಜ ಪ್ರಕೃತಿ ಎಲ್ಲವೂ ಜಡ ನಿಯಮ ಎಂಬ ಒಂದು ನಿರ್ಧಾರಕ್ಕೆ ಲೇಖಕರು ಬಂದಿರಲೂಬಹುದು. ಈ ರೀತಿಯ ಒಂದು ನಾಗರೀಕತೆಯ ಅವಸಾನದಿಂದಾಗುವ ಪರಿಣಾಮಗಳು– ದುಷ್ಟರ ಸಂಗ, ಕಾಳ ಧಂಧೆ, ಗಾಂಜಾ

ಬೆಳೆಯುವುದು ಅದರ ಸಾಗಣೆ-ಒಟ್ಟಿನಲ್ಲಿ ಸಮಾಜಕ್ಕೆ ಮಾರಕವಾದ ಎಲ್ಲಾ ಚಟುವಟಿಕೆಗಳ ಆಗರವಾಗುವ ಪರಿವರ್ತನೆಯ ವಿಧಾನ.

'ದೇವಪುರದ ಛಿದ್ರ ಪ್ರತಿಮೆಗಳು' ಸರಿಯಾದ ತಿಳುವಳಿಕೆ ಇಲ್ಲದೇ ಒಂದೇ ಒಂದು ಫೋನ್ ಕಾಲ್‌ನಿಂದಾಗಿ ಊರು ಬಿಡುವ ಪ್ರಸಂಗವನ್ನು ವಿವರಿಸುತ್ತಾರೆ. ತಪ್ಪು ಮಾಡಿರಬಹುದು ಆದರೆ ಒಂದು ಅಪರಿಚಿತ ಕರೆ ಊರೇ ಬಿಡಲು ಪ್ರೇರೇಪಿಸುತ್ತದೆ ಎಂದರೆ ಅಂತಹ ಭೀಕರ ಅಪರಾಧವನ್ನೆಸಿಗರಬಹುದು ಅಥವಾ ಅಷ್ಟರ ಮಟ್ಟಿಗೆ ಅಜ್ಞಾನ ಮನೆ ಮಾಡಿರಬಹುದು. ದೇವಪುರದ ವರ್ಣನೆ ಮಾಡುವಾಗ ಲೇಖಕರು ಹೇಳುತ್ತಾರೆ 'ಆ ಊರು ಕಟ್ಟಿದ ಹಾಗೆ ಕಾಣುವುದಿಲ್ಲ. ಗುಡ್ಡದ ಮೇಲೆ ನೆಲದ ಅಂಕುಡೊಂಕುಗಳಿಗೆ ಅನುಗುಣವಾಗಿ ಇದ್ದ ಆ ಕೊಂಪೆ ನೋಡುವುದಕ್ಕೆ ನೆಲದೊಳಗಿಂದ ಹುಟ್ಟಿದ ಹುತ್ತದ ರೀತಿ ಕಾಣುತ್ತಿತ್ತು' ಎಂದು. ನನಗೆ ಈ ವರ್ಣನೆಯನ್ನು ಕೇಳಿ ಇಂದಿನ ಮಹಾನಗರಗಳ ವಕ್ರ ಬೆಳವಣಿಗೆಯೇ ನೆನಪಿಗೆ ಬರುತ್ತದೆ. ಇವು ಕೂಡ ಪರಿಸರ ನಾಶಕ್ಕೆ ವಿಷಕಾರುವ ಹುತ್ತಗಳ ಹಾಗೆ!

ಎಲಕ್ಕಿ ವ್ಯಾಪಾರ, ಅದರೊಂದಿಗೆ ಬೆಲೆಗಾಗಿ ಕಾಯುವ ಜೂಜಿನ ರೀತಿಯ ವ್ಯಾಪಾರ, ಯಾರದೋ ಒಂದು ಫೋನ್ ಕರೆಗೆ ವ್ಯಾಪಾರ ಮಾಡುವ ಜನ, ಆ ಒಂದು ಕರೆಗೆ ಕಾದುಕುಳಿತುಕೊಳ್ಳುವ ರೀತಿ- ಇದೆಲ್ಲವನ್ನು ಲೇಖಕರು ಗ್ರಹಚಾರ, ಗ್ರಹಗತಿ ಎಂದು ನಾವೂ ಕೂಡ ಒಂದು ಅಮೂರ್ತ ಶಕ್ತಿಯ ಚಮತ್ಕಾರಕ್ಕಾಗಿ ಕಾಯುತ್ತಾ ನಮ್ಮ ಕರ್ತವ್ಯವನ್ನು ನಿರ್ಲಕ್ಷಿಸುವ ಬಗೆಯನ್ನು ಬಹು ಸೊಗಸಾಗಿ ಹಾಗೆಯೇ ವಿಡಂಬನಾತ್ಮಕವಾಗಿ ವರ್ಣಿಸಿದ್ದಾರೆ. ಮತ್ಯಾರನ್ನೋ ದೂಷಿಸುತ್ತಾ ಬದುಕುತ್ತಿರುವ ಅಂಧಶ್ರದ್ಧೆಯ ಬಗೆಗೂ ಹೇಳಿದ್ದಾರೆ. ಧರ್ಮಶ್ರದ್ಧೆ ಇರುವ ಊರು ದೇವಪುರ ಆದರೆ ಅದೇ ಊರಿನಲ್ಲಿ ಮಟ್ಕಾ, ಲಾಟರಿ, ಸಟ್ಟಾಗಳೆಲ್ಲಾ ಬಂದು ಸೇರಿ ಆಧ್ಯಾತ್ಮಿಕತೆಯ ಮುಂದುವರೆದ ಭಾಗದಂತೆ ಅದನ್ನು ಸಾಕಿ ಬೆಳೆಸುತ್ತಿರುವುದು ಧರ್ಮಶ್ರದ್ಧೆ, ಆಧ್ಯಾತ್ಮಿಕತೆಗೂ, ನೈತಿಕತೆಗೂ, ಮೌಲ್ಯಕ್ಕೂ ಯಾವ ಸಂಬಂಧವೂ ಇಲ್ಲವೆಂದು ಸೂಚಿಸುತ್ತಾರೆ.

ಲೇಖಕರ ಮೌನದ ಪರಿಭಾಷೆ ತುಂಬಾ ಚೆನ್ನಾಗಿದೆ. ಮೂಕಿಯಾಗಿದ್ದ ದ್ಯಾವಮ್ಮನನ್ನು ಕೇವಲ 'ಮೂಕಿ ದ್ಯಾವಮ್ಮ' ಎಂದು ಹೇಳಿ ಮುಗಿಸುವುದಿಲ್ಲ. 'ಮೇದಾರ ಜನಾಂಗವೆಲ್ಲಾ ದಿಕ್ಕುಗೆಟ್ಟು ಚೆದುರಿ ಚೆಲ್ಲಾಪಿಲ್ಲಿಯಾಗಿದ್ದನ್ನು ಕಂಡಿದ್ದ ಅವಳಿಂದ ಶೂನ್ಯ ಮೌನವನ್ನಲ್ಲದೇ ಇನ್ನೇನನ್ನು ತಾನೇ ನಿರೀಕ್ಷಿಸಲು ಸಾಧ್ಯ ಎನ್ನುತ್ತಾರೆ'. ಮೌನದ ಅರ್ಥ ಬಹು ಸೊಗಸಾಗಿದೆ. ಭೂಗತ ಲೋಕದ ಅನಾವರಣ ಮತ್ತೂ ಸೊಗಸಾಗಿದೆ. 'ಕೊಲೆ ಅಥವಾ ಆತ್ಮಹತ್ಯೆ ಎರಡೇ ಯಾವಾಗಲೂ ಆ ಭೂಗತ ಜಗತ್ತಿನಲ್ಲಿ ಎದುರಿರುತ್ತಿರುವ ಆಯ್ಕೆ'- ಎಷ್ಟು ಸತ್ಯ.

ಈ ಎಲ್ಲದರ ಮಧ್ಯೆ ಎರಡು ಮೂರ್ಖ ಜೀವಿಗಳ ಬಗ್ಗೆ ನಾನೂ ಹೇಳಲಿಲ್ಲವಲ್ಲ. ಇಬ್ಬರು ಗಂಡ-ಹೆಂಡತಿ, ಹೆಂಡತಿಗಿಂತ ಗಂಡ ಮೂರ್ಖ, ಗಂಡನಿಗಿಂತ ಹೆಂಡತಿ. ಒಬ್ಬರ ಮೇಲೊಬ್ಬರು ಅಹಂಕಾರದಿಂದ ಸೆಣಸಾಡುವ ಜೋಡಿಗಳನ್ನು ಸಾಮಾನ್ಯವಾಗಿ ನೋಡಿರುತ್ತೇವೆ, ಆದರೆ ಒಬ್ಬರ ಹುಚ್ಚುತನಕ್ಕೆ ಮತ್ತೊಬ್ಬರು ಬೆಂಬಲವಾಗಿ ನಿಲ್ಲುವ ಅಪರೂಪದ ಜೋಡಿಯನ್ನು ನಾವಿಲ್ಲಿ ಕಾಣಬಹುದು. ಅಂತಹ ಪ್ರಸಂಗವೇನಿರಬಹುದು ಎಂಬುದನ್ನು ನೀವು ಪುಸ್ತಕ ಓದಿಯೇ ತಿಳಿಯಬೇಕು. ಒಟ್ಟಿನಲ್ಲಿ ಸಮಾಜದಲ್ಲಿ ಬರುವ ಸರಿಸುಮಾರು ಎಲ್ಲವನ್ನು ಒಂದು ಸೂರಿನಡಿ ಹಿಡಿದದ್ದು ಲೇಖಕರ ಚಮತ್ಕಾರ.

ಇನ್ನು ಒಂದು ಹಾಸ್ಯ ಸಂದರ್ಭ ನನಗೆ ಸ್ವಲ್ಪ ಆಭಾಸ ಮತ್ತು ಮುಜುಗರವನ್ನು ಉಂಟುಮಾಡಿತು. ಇದರಲ್ಲಿ ಲೇಖಕರ ತಪ್ಪಿಲ್ಲ ಬಿಡಿ. 'ರಾಯಚೂರು' ಎಂದು ಬಂದ ತಕ್ಷಣ ಸ್ವಲ್ಪ ಕಿವಿ ನಿಮಿರಿದವು (ನನ್ನ ಊರಾದ್ದರಿಂದ), ಆಸಕ್ತಿಯಿಂದ ಬೇಗ ಬೇಗ ಓದಿದೆ. ಆದರೆ ಕೊನೆಗೆ ಬಯಲುಸೀಮೆಯ ಜನಕ್ಕೆ ಘಾಟ್ ಸೆಕ್ಷನ್‌ನಲ್ಲಿ ಪ್ರಯಾಣಿಸಿದಾಗ ಆಗುವ ಯಮಯಾತನೆಯನ್ನು ಅವರು ವಿವರಿಸಿದ ರೀತಿಯಿಂದ ನಾನು ಸ್ವಲ್ಪ ಪೆಚ್ಚಾದದ್ದು ಉಂಟು. ಆದರೆ ಮಲೆನಾಡಿನ ವರ್ಣನೆಯನ್ನು ರಮಣೀಯವಾಗಿ ಅವಕಾಶವಿದ್ದಲ್ಲೆಲ್ಲಾ ಲೇಖಕರು ರಸವತ್ತಾಗಿ ಮಾಡಿದ್ದಾರೆ.

ದೇಶದಲ್ಲಾದ ಸೂಕ್ಷ್ಮ ಘಟನೆಗಳ ವರ್ಣನೆ, ಸುರೇಶನ ಹುಚ್ಚಾಟ! ಆಗಿನ ಪರಿಸ್ಥಿತಿಯ ಯಥಾವತ್ ಚಿತ್ರಣ. ಕೇವಲ ಪುಸ್ತಕಗಳನ್ನು ಓದಿಕೊಂಡ ಮಾತ್ರಕ್ಕೆ ನಾವು ಅವರನ್ನು  ಅನುಸರಿಸಲು ಅಣಿಯಾಗಬಾರದು. ಮಾವ್ಹೋ, ಮಾರ್ಕ್ಸ್, ಸ್ಟ್ಯಾಲಿನ್, ಲೆನಿನ್, ಚೆ ಗುವೆರಾ ಮುಂತಾದವರು ತಮ್ಮ ದೇಶದಲ್ಲಿ ಮಾಡಿದ್ದನ್ನು, ನಾವು ಅಂಧಾನುಕರಣೆ ಮಾಡಬಾರದು. ಒಂದು  ದೇಶದಲ್ಲಿ ಒಂದು ಬದಲಾವಣೆ ಕೇವಲ ಒಂದು ಐಡಿಯಾಲಜಿಯನ್ನು ಮಾತ್ರ ಅವಲಂಬಿಸಿರುವುದಿಲ್ಲ. ಆ ಐಡಿಯಾಲಜಿ ಆ ದೇಶದ ಸಂಸ್ಕೃತಿ, ಜನರ ನಾಡಿಯೊಂದಿಗೆ ಮಿಡಿಯಬೇಕು, ಆಗ ಅದು ಒಂದು  ಯಶಸ್ವಿ ಆಂದೋಲನದ ಸ್ವರೂಪ ಪಡೆಯುತ್ತದೆ. ಇದನ್ನರಿಯದ ಸುರೇಶನ ಅವಾಂತರ ಅವನ ಬುದ್ಧಿವಂತಿಕೆಯ ಮೇಲೆ ನಮಗೆ ಮರುಕ ಹುಟ್ಟಿಸುತ್ತದೆ. ಮಲಯಾದಿಂದ ಭಾರತಕ್ಕೆ ಬಂದು ಇಲ್ಲಿ ಕ್ರಾಂತಿಯ
ಹುಚ್ಚನ್ನು ಹಚ್ಚಿಸಿಕೊಂಡು ತಾನೂ ಒಬ್ಬ ನಕ್ಸಲೈಟ್ ಎಂದು ಹೇಳಿಕೊಂಡು ತಿರುಗುವುದರಲ್ಲೇ ಅವನು ತನ್ನ ಜೀವನದ ಸಾರ್ಥಕವನ್ನು ಕಂಡುಕೊಂಡಿದ್ದ. ಈಗಲೂ ಈ ತರಹದ ಹುಚ್ಚಿಗೇನು ಕಮ್ಮಿಯಿಲ್ಲ ಬಿಡಿ. ತಾವೂ ಒಬ್ಬ ನಕ್ಸಲೈಟ್ ಎಂದು ಹೇಳಿಕೊಳ್ಳುವುದರಲ್ಲಿ ಬುದ್ಧಿಜೀವಿಗಳು (ಹಾಗೆಂದುಕೊಳ್ಳುತ್ತಾರೆ!) ಪ್ರತಿಷ್ಠೆಯನ್ನು ಮತ್ತು ತೃಪ್ತಿಯನ್ನು ಪಡೆದುಕೊಳ್ಳುತ್ತಾರೆ. ಅದಕ್ಕೆ ನನ್ನ ಅಭ್ಯಂತರವೇನು ಇಲ್ಲ, ಆದರೆ ಅಭ್ಯಂತರವಿರುವವರೂ, ಅಭಿವ್ಯಕ್ತಿ ಸ್ವಾತಂತ್ರ್ಯಕ್ಕಿಂತ ತಮ್ಮ ಐಡಿಯಾಲಜಿ ದೊಡ್ಡದೆಂದು ತಿಳಿದವರು ಅಂತಹವರನ್ನು ಬದುಕಲು ಬಿಡಬೇಕಲ್ಲವೇ?

ಇನ್ನು ಗೌರಿಯ ವಿಷಯ ಹೇಳುವಾಗ ಲೇಖಕರು ಒಂದು ಮಾತು ಹೇಳುತ್ತಾರೆ, ನನಗೆ ಸ್ವಲ್ಪ ಅರಗಿಸಿಕೊಳ್ಳುವುದು ಕಷ್ಟವಾಯಿತು. ಬಸ್ಸಿನಲ್ಲಿ ಪ್ರಯಾಣಿಸುತ್ತಿರುವಾಗ ಇಬ್ಬರು ಆಗುಂತಕರನ್ನು ನೋಡಿ ಗೌರಿ ಹೆದರಲಿಲ್ಲ. ಇಷ್ಟೇ ಹೇಳಿ ಲೇಖಕರು ಸುಮ್ಮನಾಗುವುದಿಲ್ಲ. "ಸ್ತ್ರೀ ಸಹಜವಾದ ಹೆದರುವ ಗುಣ ಮಾತ್ರ ಅವಳಲ್ಲಿ ಇರಲೇ ಇಲ್ಲ" ಅಂತ ಲೇಖಕರು ಬರೆಯುತ್ತಾರೆ. ಹೆದರಿಕೆ ಸ್ತ್ರೀಗೆ ಅಷ್ಟು ಸಹಜವೇ? ಅವಳು ಹೆದರಲೇಬೇಕೇ? ಅಥವಾ ಹೆದರುವುದು ಪ್ರಕೃತಿ ಸಹಜ ಎನ್ನುವಷ್ಟರ ಮಟ್ಟಿಗೆ ಅದು ರೂಢಿಗತವಾಗಿ ಸಮಾಜದಲ್ಲಿ ಬಂದುಬಿಟ್ಟಿದೆಯೇ? ವೈಜ್ಞಾನಿಕ ವಿಚಾರಧಾರೆಯುಳ್ಳಪೂರ್ಣಚಂದ್ರರಂತಹ ಲೇಖಕರಲ್ಲಿ ಈ ವಾಕ್ಯ ಸಹ್ಯವಾಗಲಿಲ್ಲ.

ಇನ್ನು ಎಲ್ಲ ರೀತೀಯ ತರಹೇವಾರು ಅಸಂಬದ್ಧ ಮತ್ತು ಅಷ್ಟೇ ದಿಗಿಲುಂಟುಮಾಡುವ ಘಟನೆಗಳು ಒಂದರ ಮೇಲೊಂದರಂತೆ ನಡೆದರೂ ಧೈರ್ಯಗೆಡದ ಸುರೇಶ ಮತ್ತು ಗೌರಿಗೆ ಆದರ್ಶ ದಂಪತಿಗಳೆನ್ನಬೇಕೋ, ಆದರ್ಶ ಬೆಪ್ಪರೆನ್ನಬೇಕೋ ತೋಚದಾಯಿತು.

ಅಂತೂ ಪುಸ್ತಕವನ್ನು ಪೂರ್ತಿ ಓದಿ ಮುಗಿಸಿದಾಗ ನನಗನ್ನಿಸಿದ್ದೇನೆಂದರೆ, ಹಿಂದಿಯಲ್ಲಿ 'ಜುಗಾಡ್' ಎನ್ನುವ ಒಂದು ಶಬ್ದವಿದೆ. ಅದರರ್ಥ ಒಂದು ಸಮಸ್ಯೆಗೆ ಪರಿಹಾರ ಹುಡುಕಲು ಮಾಡುವ ಅಸಂಬದ್ಧ, ತರ್ಕವಿಹೀನ, ವಿಚಿತ್ರ ಪ್ರಯತ್ನಗಳು. ಅದರಿಂದಾಗಿಯೇ ಬಹುಶಃ ಈ ಕೃತಿಯ ಹೆಸರು 'ಜುಗಾರಿ ಕ್ರಾಸ್' ಎಂದಾಗಿರಬಹುದು. ಒಂದಕ್ಕೊಂದು ಸಂಬಂಧವಿಲ್ಲದೇ, ತಳುಕು ಹಾಕಿಕೊಂಡು ಕೊನೆಗೆ ನಾವು ಆ ಜೂಜು ರೀತಿಯಲ್ಲಿ ನಡೆಯುವ ಜೀವನದ ಒಂದು ಭಾಗವಾಗಿ ಏಕೆ ನೋಡಬಾರದು ಎಂಬಲ್ಲಿಗೆ ಬಂದು ನಿಲ್ಲುವ ಹೊತ್ತಿಗೆ ಯಾವುದಕ್ಕೂ ಸರಿಯಾದ ಮತ್ತು ಸಮರ್ಪಕವಾದ ಉತ್ತರಗಳನ್ನು ಕೊಡದ ನಮ್ಮ ಸರ್ಕಾರದಂತೆ ಕಾದಂಬರಿ ಮುಕ್ತಾಯ ಹೊಂದುತ್ತದೆ.

**ವಿ.ಸೂ:** ಪೂರ್ಣಚಂದ್ರರಂತಹ ಅಪೂರ್ವ ಲೇಖಕರನ್ನು ವಿಮರ್ಶೆ ಮಾಡುವ ದೃಷ್ಟಿಯಿಂದ ಬರೆದ ಲೇಖನವಲ್ಲ, ವಿಮರ್ಶೆ ಮಾಡುವಷ್ಟು ದೊಡ್ಡವಳು ನಾನಲ್ಲ. ಇದು ನನ್ನ ಅಭಿಪ್ರಾಯ ಮಾತ್ರವಾಗಿರುತ್ತದೆ!

**–ಮಾನಸ.ಆರ್.ಕುಲಕರ್ಣಿ**